212

# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\4288\2014\ಸನಿಕಾಸ-2 DRE-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 26.10.2016

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ತುಮಕೂರು ತಾಲೂಕು ಗೇರಹಳ್ಳಿ ಗ್ರಾಮದ ಸರ್ವೆ ನಂ.31 ರಲ್ಲಿ ಶ್ರೀ. ಹೆಚ್.ಎ. ಮುಕ್ತಿಯಾರ್ ತಂದೆ ಅಬ್ದುಲ್ ರೆಹಮಾನ ಇವರು ಅಕ್ರಮ ಕಲ್ಲು ಗಣಿಗಾರಿಕೆ ನಡೆಸುತ್ತಿರುವುದನ್ನು ಸಂಪೂರ್ಣ ನಿಲ್ಲಿಸಿ ಇನ್ನು ಮುಂದೆ ಗಣಿಗಾರಿಕೆ ನಡೆಸದಂತೆ ನಿರ್ಬಂಧ ವಿಧಿಸುವ ಕುರಿತು.

*******

ಶ್ರೀ. ರಂಗಸ್ವಾಮಯ್ಯ ಕುಚ್ಚಂಗಿ, ಉರುಕೆರೆ ಪೋಸ್ಟ್, ತುಮಕೂರು ತಾಲೂಕು ಮತ್ತು ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ 1) ಶ್ರೀ ಸಿದ್ದನಂಜಯ್ಯ ಉಪ-ನಿರ್ದೇಶಕರು ಗಣಿ ಮತ್ತು ಭೂವಿಜ್ಞಾನ ಇಲಾಖೆ ತುಮಕೂರು ಜಿಲ್ಲೆ ಮತ್ತು (2) ಶ್ರೀ ಮಾರುತಿ ಪ್ರಸನ್ನ ತಹಶೀಲ್ದಾರ, ತುಮಕೂರು ತಾಲೂಕು (ಇನ್ನು ಮುಂದೆ ಎದುರುದಾರ ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಅವ್ಯವಹಾರದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ತುಮಕೂರು ತಾಲ್ಲೂಕು ಗೇರಹಳ್ಳಿ ಗ್ರಾಮದ ಸ. ನಂ: 31ರಲ್ಲಿ ಹೆಚ್.ಎ.ಮುಕ್ತಿಹಾಳ್ ತಂದೆ ಅಬ್ದುಲ್ ರೆಹಮಾನ್ ಇವರು 2ಎ 20ಗು., ಜಮೀನಿನಲ್ಲಿ ಕಲ್ಲು ಗಣಿ ಗುತ್ತಿಗೆ ಪಡೆದು ಗಣಿಗಾರಿಕೆ ನಡೆಸುತ್ತಿದ್ದು ಇದರಿಂದ ಅಕ್ಕಪಕ್ಕದ ಗ್ರಾಮಗಳಿಗೆ ಶಬ್ದ ಮಾಲಿನ್ಯ, ವಾಯು ಮಾಲಿನ್ಯ ಉಂಟಾಗಿ ಪರಿಸರ ಕಲುಶಿತಗೊಳ್ಳುತ್ತಿದ್ದೆ. ಈ ಜಮೀನಿನ ಪಕ್ಕದಲ್ಲಿಯೇ ಬಸವನಬೆಟ್ಟ ಇದ್ದು ಇಲ್ಲಿ ಪ್ರಸಿದ್ದ ದೇವಸ್ಥಾನಗಳು ಇವೆ. ಈ ಬೆಟ್ಟದಲ್ಲಿ ಹುಲ್ಲುಗಾವಲಿದ್ದು ಹಸು ಮೇಕೆ

211

ಇತರ ಜಾನುವಾರುಗಳು ಇಲ್ಲಿ ಬದುಕುತ್ತಿವೆ. ಮೇಲೆ ಹೇಳಿದ ವ್ಯಕ್ತಿಯು ಜೆಲ್ಲಿ ಕ್ರಷರ್ ಮೆಷಿನ್ ನಡೆಸುತ್ತಿದ್ದರಿಂದ ತುಂಬಾ ಪರಿಸರಕ್ಕೆ ಹಾನಿ ಯಾಗಿ ಈತನು ಅಕ್ರಮವಾಗಿ 1995ರಿಂದ 2014ರವರೆಗೆ ಗಣಿ ಕೆಲಸವನ್ನು ಯಾವ ಅಡೆತಡೆ ಇಲ್ಲದೆ ಮಾಡುತ್ತಾ ಬಂದಿದ್ದರಿಂದ ಸರ್ಕಾರದ ಬೊಕ್ಕಸಕ್ಕೆ ಸುಮಾರು 10 ಕೋಟಿಯಷ್ಟು ನಷ್ಟ ಉಂಟಾಗಿರುತ್ತದೆ. ಆದ್ದರಿಂದ ಇದನ್ನು ತಡೆಗಟ್ಟಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಎದುರುದಾರರು ಸಾಕಷ್ಟು ಮನವಿ ಸಲ್ಲಿಸಿದರೂ ಸಹ ಅವರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಆದ್ದರಿಂದ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಂಡು ಈ ಅಕ್ರಮ ಗಣಿಗಾರಿಕೆಯನ್ನು ತಡೆಗಟ್ಟಬೇಕೆಂದು ದೂರು ಸಲ್ಲಿಸಿದ್ದಾರೆ.

3. ಎದುರುದಾರ ನಂ:1 ರವರು ತಮ್ಮ ಆಕ್ಷೇಪಣೆಯಲ್ಲಿ ಸದರಿ ದೂರಿನ ವಿಷಯ 2ನೇ ಎದುರುದಾರರ ವ್ಯಾಪ್ತಿಗೆ ಬರುತ್ತಿದ್ದು ಇದರಲ್ಲಿ ತಮ್ಮ ಕಛೇರಿಯ ವ್ಯಾಪ್ತಿಗೆ ಈ ವಿಷಯ ಬರದ ಕಾರಣ ತಮ್ಮನ್ನು ಪ್ರಕರಣದಿಂದ ಕೈಬಿಡಬೇಕೆಂದು ವಿನಂತಿಸಿದ್ದಾರೆ.

4. ಎದುರುದಾರ ನಂ:2 ರವರು ತಮ್ಮ ಆಕ್ಷೇಪಣೆಯಲ್ಲಿ ಸ. ನಂ: 31ರಲ್ಲಿ ಗಣಿಗಾರಿಕೆ ನಡೆಸಲು ಹೆಚ್.ಎ. ಅಬ್ದುಲ್ ರೆಹಮಾನ್ ರವರು ದಿ: 5.6.1997ರಿಂದ 5 ವರ್ಷಗಳವರೆಗೆ 1ಎ., ಪ್ರದೇಶದಲ್ಲಿ ಗಣಿಗಾರಿಕೆ ಮಾಡಲು ಸರ್ಕಾರದಿಂದ ಅನುಮತಿ ನೀಡಲಾಗಿತ್ತು. ದಿ: 4.6.2002ಕ್ಕೆ ಈ ಪರವಾನಗಿ ಅವಧಿ ಮುಕ್ತಾಯಗೊಂಡಿದ್ದು ನಂತರ ಕಾರ್ಮಿಕರ ಸಮಸ್ಯೆ ಹಾಗೂ ಗುತ್ತಿಗೆದಾರರು ಮರಣ ಹೊಂದಿದ ಕಾರಣ ಗಣಿಗಾರಿಯನ್ನು ಸ್ಥಗಿತಗೊಳಿಸಲಾಗಿರುತ್ತದೆ. ಆ ನಂತರ ಹೆಚ್.ಎ. ಅಬ್ದುಲ್ ರೆಹಮಾನ್ ರವರ ಹೆಂಡತಿ ಗುತ್ತಿಗೆನವೀಕರಣಕ್ಕಾಗಿ ಅರ್ಜಿ ಸಲ್ಲಿಸಿದ್ದು. ನಿಗಧಿತ ಅವಧಿಯಲ್ಲಿ ಅರ್ಜಿ ಸಲ್ಲಿಸದ ಕಾರಣ ದಿ: 19.1.2010ರಂದು ಅವರ ಅರ್ಜಿಯನ್ನು ತಿರಸ್ಕರಿಸಲಾಗಿರುತ್ತದೆ. ನಂತರ ಇವರು ಮೇಲ್ಮನವಿ ಸಲ್ಲಿಸಿದ್ದು ಅದರಲ್ಲಿ ಗುತ್ತಿಗೆಗೆ ಸಂಬಂಧಿಸಿದ ಬಾಕಿ ರಾಜಧನ ಮತ್ತು ಬಡ್ಡಿಯನ್ನು ಸರ್ಕಾರಕ್ಕೆ

ಜಮಾ ಮಾಡಬೇಕೆಂದು ತಿಳಿಸಿದ್ದು ಅವರು ಆ ಹಣವನ್ನು ಸರ್ಕಾರಕ್ಕೆ ಕಟ್ಟಿದ್ದರಿಂದ ದಿ: 6.2.2012ರಂದು ಇವರ ಅರ್ಜಿಯನ್ನು ಪುನರ್ ಪರಿಶೀಲಿಸುವಂತೆ ಆದೇಶಿಸಿರುತ್ತಾರೆ.

5. ಈ ಗಣಿಗಾರಿಕೆ ಲೈಸನ್ಸ್ ನವೀಕರಣ ಮಾಡುವ ವೇಳೆಯಲ್ಲಿ ಕಂದಾಯ ಮತ್ತು ಅರಣ್ಯ ಇಲಾಖೆ ಅಭಿಪ್ರಾಯ ನೀಡಲು ದಿ: 25.2.2012 ರಂದು ಪತ್ರ ಬರೆಯಲಾಗಿದ್ದು ಅವರಿಂದ ಅಭಿಪ್ರಾಯವನ್ನು ನಿರೀಕ್ಷಿಸಲಾಗಿದೆ. ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮ 1994ರ ಉಪ ನಿಯಮ 21 ದಿ: 16.12.2013ರಂದು ಪರಿಷ್ಕರಣೆ ಆದೇಶ ಜಾರಿಯಾದ ನಂತರ ಗಣಿಗಾರಿಕೆಯನ್ನು ಸ್ಥಗಿತಗೊಳಿಸಲು ಸೂಚನೆ ನೀಡಲಾಗಿತ್ತು. ಆದಾಗ್ಯೂ ಇವರು ಅನಧಿಕೃತವಾಗಿ ಗಣಿಗಾರಿಕೆ ಮಾಡಿದ ಕಾರಣ 120000/-ರೂಗಳ ದಂಡವಿಧಿಸಲಾಗಿದೆ. ದಿ: 20.12.2014ರಂದು ಇವರು ದಂಡವನ್ನು ಪಾವತಿಸಿರುತ್ತಾರೆ. ಈ ಬಗ್ಗೆ ದಿ: 12.12.2014ರಂದು ಸಾರ್ವಜನಿಕರಿಂದ ಈ ಅಕ್ರಮ ಗಣಿಗಾರಿಕೆ ಬಗ್ಗೆ ದೂರು ಬಂದ ಹಿನ್ನಲೆಯಲ್ಲಿ ಗಣಿಗಾರಿಗೆ ಪ್ರದೇಶದ ಪಕ್ಕಪಕ್ಕದ ಗ್ರಾಮಸ್ಥರೊಂದಿಗೆ ಸ್ಥಳ ಪರಿಶೀಲಿಸಿ ಗಣಿ ಮತ್ತು ಭೂ ವಿಜ್ಞಾನ, ಕಂದಾಯ ಇಲಾಖೆ, ಮತ್ತು ಪರಿಸರ ಇಲಾಖೆಯ ಅಧಿಕಾರಿಗಳು ಸೇರಿ ಮಹಜರ್ ಜರುಗಿಸಿರುತ್ತಾರೆ. ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮ 1994ರ ಉಪ ನಿಯಮ 21 (2) ರ ಅಡಿಯಲ್ಲಿ ಅರ್ಜಿಯು ಪರಿಶೀಲನೆ ಹಂತದಲ್ಲಿರುತ್ತದೆ. ಆದ್ದರಿಂದ ಮುಂದಿನ ಆದೇಶವಾಗುವವರೆಗೆ ಗಣಿಗಾರಿಕೆಯನ್ನು ಸ್ಥಗಿತಗೊಳಿಸುವಂತೆ ಇವರಿಗೆ ಆದೇಶ ನೀಡಲಾಗಿದೆ. ಆದ್ದರಿಂದ ದೂರಿನಲ್ಲಿ ಆಪಾದಿಸಿರುವ ಯಾವುದೇ ಅಕ್ರಮ ಗಣಿಗಾರಿಕೆ ನಡೆದಿರುವುದಿಲ್ಲ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

6. ಎದುರುದಾರ ನಂ:3 ರವರು ತಮ್ಮ ಆಕ್ಷೇಪಣೆಯಲ್ಲಿ ಎದುರುದಾರ ನಂ: 2 ರವರ ಆಕ್ಷೆಪಣೆಗಳನ್ನೇ ಪುನರ್ ಉಚ್ಚರಿಸಿದ್ದಾರೆ. ಸ. ನಂ: 31ರ ಅಕ್ಕಪಕ್ಕದಲ್ಲಿ 2-3 ಐತಿಹಾಸಿಕ ಹಿನ್ನಲೆ ಹೊಂದಿದ ದೇವಸ್ಥಾನಗಳು ಇದ್ದು ಆದ್ದರಿಂದ ಸದರಿ ಗಣಿಗಾರಿಕೆಗೆ ಪರವಾನಗಿ

Sd/-

269

ನೀಡಬಾರದು ಅಂತ ತಿಳಿಸಿದ್ದು ಆದ್ದರಿಂದ ಅದು ಪರಿಶೀಲನೆ ಹಂತದಲ್ಲಿರುತ್ತದೆ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

7. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಎದುರುದಾರ ನಂ:2 ರವರು ತಮ್ಮ ಆಕ್ಷೇಪಣೆಗಳಲ್ಲಿ ಸುಳ್ಳು ವಿಷಯಗಳನ್ನು ನಿರೂಪಿಸಿದ್ದು ಅವರು ಸಾಕಷ್ಟು ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ಕಳೆದ 14 ವರ್ಷಗಳಿಂದ ರೆಹಮಾನ್ ಆತನ ಮರಣಾ ನಂತರ ಆತನ ಮಗ ಅಕ್ರಮ ಗಣಿಗಾರಿಕೆ ನಡೆಸಿ ಹತ್ತಾರು ಕೋಟಿ ಆದಾಯಗಳಿಸಿದ್ದಾರೆ ಆದರೆ ಅವರಿಗೆ ಕೇವಲ 1,20,000/- ರೂಗಳ ದಂಡವನ್ನು ಮಾತ್ರ ವಿಧಿಸಿದ್ದಾರೆ. ಈ ಗಣಿಗಾರಿಕೆಯಿಂದ ಪರಿಸರ ನಾಶವಾಗಿ ಅಕ್ಕಪಕ್ಕದ ಜನರ ನೆಮ್ಮದಿಗೆ ಬಂಗ ಉಂಟಾಗಿರುತ್ತದೆ. ಆದ್ದರಿಂದ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ವಿನಂತಿಸಿದ್ದಾರೆ.

8. ದೂರುದಾರರು ಹಾಜರುಪಡಿಸಿದ ದೂರು ಮತ್ತು ದಾಖಲಾತಿಗಳು, ಆಕ್ಷೇಪಣೆ ಮತ್ತು ದಾಖಲಾತಿಗಳು, ಮತ್ತು ಪ್ರತ್ಯುತ್ತರ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ, ದೂರುದಾರರ ಒಂದು ಅಂದಾಜಿನ ಪ್ರಕಾರ 1995ರಿಂದ ಅನಧಿಕೃತವಾಗಿ ಕಲ್ಲು ಗಣಿಗಾರಿಕೆ ನಡೆಸುತ್ತಿದ್ದು ಸಣ್ಣ ಯಂತ್ರಗಳನ್ನು ಉಪಯೋಗಿಸಿ 2010ರವರೆಗೆ ಪ್ರತಿನಿತ್ಯ 5-6 ಲಾರಿ ಜೆಲ್ಲಿ ಸಾಗಣೆ ಮಾಡುತ್ತಿದ್ದಾರೆ. ಪ್ರತಿ ಲಾರಿ ಜೆಲ್ಲಿಗೆ 15,000/-ರೂಗಳಿದ್ದು ಒಂದು ದಿನಕ್ಕೆ 15000*5=75000/- ರೂಗಳಂತೆ ಸರ್ಕಾರಕ್ಕೆ ಸುಮಾರು 13ಕೋಟಿಯಷ್ಟು ನಷ್ಟವಾಗಿರುತ್ತದೆ. ಕಳೆದ 3 ವರ್ಷದಿಂದ ಬ್ರಹತ್ ಯಂತ್ರಗಳನ್ನು ಉಪಯೋಗಿಸಿ ಪ್ರತಿ ದಿನ 20 ಲಾರಿ ಜೆಲ್ಲಿ ಸಾಗಿಸುತ್ತಿದ್ದು ಇದರಿಂದ ಪ್ರತಿ ದಿನ 4 ಲಕ್ಷ ಸರ್ಕಾರಕ್ಕೆ ನಷ್ಟ ಉಂಟಾಗುತ್ತಿದ್ದೆ ಈ ರೀತಿ ಅಕ್ರಮ ಗಣಿಗಾರಿಕೆಯಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟಾಗಿದ್ದು ಅಲ್ಲದೆ ಪರಿಸರ ಹಾನಿಯಾಗಿರುತ್ತದೆ.

9. ದೂರುದಾರರು ಹಾಗೂ ಈ ಸ. ನಂ: 31ರ ಜಮೀನಿನ ಅಕ್ಕಪಕ್ಕದ ಸುಮಾರು 5-6 ಹಳ್ಳಿಯ ಗ್ರಾಮಸ್ಥರು ಸೇರಿ ಈ ಅಕ್ರಮ ಗಣಿಗಾರಿಯನ್ನು ತಡೆಯುವುದಕ್ಕೆ ಮನವಿ ಸಲ್ಲಿಸಿದ್ದರೂ ಸಹ ಅದನ್ನು ಕಟ್ಟುನಿಟ್ಟಾಗಿ ತಡೆಗಟ್ಟಿರುವುದಿಲ್ಲ. ದೂರುದಾರರು ಹಾಜರುಪಡಿಸಿದ ಫೋಟೋಗಳನ್ನು ಪರಿಶೀಲಿಸಿದಾಗ ಈ ಗಣಿಗಾರಿಕೆ ಸ್ಥಳದ ಅಕ್ಕಪಕ್ಕದಲ್ಲಿ ಐತಿಹಾಸಿಕ ದೇವಸ್ಥಾನಗಳು ಹಾಗೂ ಬೆಟ್ಟ ಇರುವುದು ಕಂಡುಬರುತ್ತದೆ. ಅಲ್ಲದೆ ಮನೆಯ ಗೋಡೆಗಳು ಬಿರುಕು ಉಂಟಾಗಿದ್ದು ಸಹ ಕಂಡುಬರುತ್ತದೆ.

10. ಗ್ರಾಮಸ್ಥರು ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ದೂರು ನೀಡಿದಾಗ ಕಂದಾಯ ಇಲಾಖೆ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಮತ್ತು ಪರಿಸರ ಇಲಾಖೆ ಜಂಟಿಯಾಗಿ ಗ್ರಾಮಸ್ಥರ ಸಮಕ್ಷಮ ಮಹಜರ್ ಮಾಡಲಾಗಿ ಈ ಗಣಿಗಾರಿಕೆಯಿಂದ ಪರಿಸರಕ್ಕೆ ನಷ್ಟ ಉಂಟಾಗಿ ಸರ್ಕಾರದ ಭೊಕ್ಕಸಕ್ಕೂ ಕೂಡ ನಷ್ಟ ಉಂಟಾಗಿದ್ದು ಕಂಡುಬರುತ್ತಿದೆ. ಆಗ ಈ ಜಂಟಿ ಇಲಾಖೆ ಅಧಿಕಾರಿಗಳು ಮುಂದಿನ ಆದೇಶದ ವರೆಗೆ ಗಣಿಗಾರಿಕೆ ಮಾಡದಂತೆ ತಾತ್ಕಾಲಿಕ ಆಥೇಶ ಹೊರಡಿಸಿದ್ದಾರೆ. ಇದರಿಂದ ಕಂಡುಬರುವುದೇನೆಂದರೆ ಯಾವನೋ ಒಬ್ಬ ವ್ಯಕ್ತಿ ತನ್ನ ಲಾಭಕ್ಕೋಸ್ಕರ ಅಕ್ರಮವಾಗಿ ಗಣಿಗಾರಿಕೆ ನಡೆಸಿ ಪರಿಸರ ಹಾನಿ ಉಂಟು ಮಾಡಿದ್ದಲ್ಲದೆ ಸರ್ಕಾರದ ಭೋಕ್ಕಸಕ್ಕೂ ಕೂಡ ನಷ್ಟ ಉಂಟುಮಾಡುತ್ತಿರುವುದು ಕಂಡುಬರುತ್ತದೆ. ಆದ್ದರಿಂದಲೇ ದೂರುದಾರರು ಹಾಗೂ ಗ್ರಾಮಸ್ಥರು ಸೇರಿ ಸಾಮೂಹಿಕವಾಗಿ ಈ ಅಕ್ರಮ ಗಣಿಗಾರಿಕೆ ತಡೆಯಬೇಕೆಂದು ಸಮಿತಿ ರಚಿಸಿ ಹೋರಾಟ ಮಾಡುತ್ತಿರುವುದು ಕಂಡುಬರುತ್ತದೆ. ಆದರೆ ಈ ಅಕ್ರಮ ಗಣಿಗಾರಿಕೆ ತಡೆಗಟ್ಟುವ ಜವಾಬ್ದಾರಿ ಹೊಂದಿದ ಎದುರುದಾರ ನಂ: 2ಮತ್ತು 3 ರವರು ಯಾವುದೇ ಕ್ರಮಕೈಗೊಳ್ಳದೆ ತಮ್ಮ ಕರ್ತವ್ಯಲೋಪವೆಸಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

Sd/-

207

11. 1995ರಿಂದ ಇಂದಿನವರೆಗೆ ಈ ಅಕ್ರಮ ಗಣಿಗಾರಿಕೆ ನಿರಂತರವಾಗಿ ನಡೆದುಕೊಂಡು ಬಂದಿದ್ದು ಯಾವೊಬ್ಬ ಅಧಿಕಾರಿಯು ಇದನ್ನು ತಡೆಗಟ್ಟಲು ಕಟ್ಟುನಿಟ್ಟಿನ ಕ್ರಮ ಕೈಗೊಂಡಿರುವುದಿಲ್ಲ. ದೂರುದಾರರು ಹಾಗೂ ಗ್ರಾಮಸ್ಥರು ಸೇರಿ ಎದುರುದಾರರ ನಂ:2 ಮತ್ತು 3ರವರು ಕರ್ತವ್ಯನಿರ್ವಹಿಸುತ್ತಿರುವಾಗ ಮನವಿ ಸಲ್ಲಿಸಿದರೂ ಸಹ ಕ್ರಮ ಕೈಗೊಳ್ಳದ ಕಾರಣ ಅವರೇ ಈ ಅಕ್ರಮ ಗಣಿಗಾರಿಕೆ ತಡೆಗಟ್ಟುವಲ್ಲಿ ವಿಫಲರಾಗಿದ್ದಾರೆಂದು ಕಂಡುಬರುತ್ತದೆ. ಆದ್ದರಿಂದ ಇವರು ಕರ್ತವ್ಯದಲ್ಲಿ ಲೋಪವೆಸಗಿದ್ದಾರೆಂದು ಸ್ಪಷ್ಟವಾಗಿ ಮೇಲ್ನೋಟಕ್ಕೆ ಕಂಡುಬರುತ್ತದೆ.

12. ಆದ್ದರಿಂದ ತುಮಕೂರು ತಾಲೂಕು ಗೇರಹಳ್ಳಿ ಗ್ರಾಮದ ಸರ್ವೆ ನಂ.31 ರಲ್ಲಿ ಶ್ರೀ. ಹೆಚ್.ಎ. ಮುಕ್ತಿಯಾರ್ ತಂದೆ ಅಬ್ದುಲ್ ರೆಹಮಾನ ಇವರು ಅಕ್ರಮ ಕಲ್ಲು ಗಣಿಗಾರಿಕೆ ನಡೆಸುತ್ತಿರುವುದನ್ನು ಸಂಪೂರ್ಣ ನಿಲ್ಲಿಸಿ ಇನ್ನು ಮುಂದೆ ಗಣಿಗಾರಿಕೆ ನಡೆಸದಂತೆ ನಿರ್ಬಂಧ ವಿಧಿಸುವಂತೆ ಸಕ್ಷಮ ಪ್ರಾಧಿಕಾರವು ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಆದೇಶಿಸುವ ಅಧಿಕಾರವನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12 (1)ರಲ್ಲಿ ಗೌರವಾನ್ವಿತ ಉಪಲೋಕಾಯುಕ್ತರು ಹೊಂದಿದ್ದಾರೆ.

13. ಆದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 26.10.16.

(ನ್ಯಾಯಮೂರ್ತಿ ಸುಬಾಷ್ ಬಿ ಅಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.